# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 229
2) ಸದಸ್ಯರ ಹೆಸರು : ಶ್ರೀ ಐವನ್ ಡಿ'ಸೋಜಾ (ನಾಮನಿರ್ದೇಶನ ಹೊಂದಿದವರು)
3) ಉತ್ತರಿಸುವ ದಿನಾಂಕ : 10-12-2018
4) ಉತ್ತರಿಸಬೇಕಾದ ಸಚಿವರು : ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿನ ಮೀನನ್ನು ಗೋವಾ ರಾಜ್ಯದಲ್ಲಿ ಮಾರಾಟ ಮಾಡಲು ಫಾರ್ಮಾಲಿನ್ ಬಳಕೆ ಮಾಡಲಾಗಿದೆ ಎಂದು ನಿಷೇಧಿಸಿರುವುದು ನಿಜವೇ; ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು; | ಫಾರ್ಮಾಲಿನ್ ಬಳಕೆ ಮಾಡಲಾಗಿದೆ ಎಂದು ರಾಜ್ಯದ ಮೀನನ್ನು ಗೋವ ರಾಜ್ಯದಲ್ಲಿ ಮಾರಾಟ ಮಾಡಲು ನಿಷೇಧಿಸಿರುವುದಿಲ್ಲ. |
| ಆ) | ರಾಜ್ಯದಲ್ಲಿ ಫಾರ್ಮಾಲಿನ್ ಬಳಕೆ ಮಾಡಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಕ್ರಮದಿಂದ ರಾಜ್ಯದಲ್ಲಿ ಮೀನುಗಾರರಿಗೆ ಉಂಟಾದ ನಷ್ಟಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಫಾರ್ಮಾಲಿನ್ ಬಳಕೆ ಮಾಡುತ್ತಿದ್ದಾರೆ ಎಂದು ಮಾಧ್ಯಮಗಳಲ್ಲಿ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಬಂದ ಮಾಹಿತಿಯನ್ನಾಧರಿಸಿ, ಕರಾವಳಿ ಜಿಲ್ಲೆಗಳ ವಿವಿಧ ಸ್ಥಳಗಳಲ್ಲಿ ಫಾರ್ಮಲಿನ್ ಬಳಸಿರುವ ಬಗ್ಗೆ ತಪಾಸಣೆ ಮಾಡಲಾಗಿದೆ. ಆದರೆ ಎಲ್ಲಿಯೂ ಫಾರ್ಮಾಲಿನ್ ಬಳಸಿರುವುದು ಕಂಡುಬಂದಿರುವುದಿಲ್ಲ. |
| ಇ) | ಫಾರ್ಮಾಲಿನ್ ಬಳಕೆ ಬಗ್ಗೆ ರಾಜ್ಯದಲ್ಲಿ ದೂರುಗಳು ಬಂದಾಗ ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಕೈಗೊಂಡಿರುವ ಕ್ರಮದ ಬಗ್ಗೆ ವಿವರ ನೀಡುವುದು; | ಮೀನುಗಳನ್ನು ಮಾರಾಟ ಮಾಡುವ ಸಂದರ್ಭದಲ್ಲಿ ಫಾರ್ಮಾಲಿನ್ ಬಳಕೆ ಮಾಡಿರುವ ಬಗ್ಗೆ ಮಾಧ್ಯಮಗಳಲ್ಲಿ ಬಂದಿರುವ ಮಾಹಿತಿಯನ್ನಾಧರಿಸಿ ಬಂದರುಗಳಲ್ಲಿ, ಮೀನಿನ ಅಂಗಡಿಗಳಲ್ಲಿ, ಮೀನು ಸಂಸ್ಕರಣಾ ಘಟಕಗಳಲ್ಲಿ, ಮೀನು ಮಾರುಕಟ್ಟೆಗಳಲ್ಲಿ ಹಾಗೂ ವಿವಿಧ ಮಾಲ್‌ಗಳಲ್ಲಿ ಮೀನಿನ ಮಾದರಿಗಳನ್ನು ಕೇಂದ್ರದ ಮೀನುಗಾರಿಕೆ ತಂತ್ರಜ್ಞಾನ ಸಂಸ್ಥೆ (CIFT) ಅಭಿವೃದ್ಧಿಪಡಿಸಿದ ಫಾರ್ಮಾಲಿನ್ ಕ್ಷಿಪ್ರ ಪತ್ತೆ ಕಿಟ್‌ಗಳನ್ನು ಬಳಸಿ ಪರೀಕ್ಷೆ ಮಾಡಲಾಗಿದೆ.<br><br>ಸದರಿ ಮೀನಿನ ಮಾದರಿಗಳ ಪರೀಕ್ಷೆಯ ಫಲಿತಾಂಶದಲ್ಲಿ ಫಾರ್ಮಾಲಿನ್ ಅಂಶ ಕಂಡುಬಂದಿರುವುದಿಲ್ಲ ಹಾಗೂ ವಿವಿಧ ದಿನಾಂಕಗಳಂದು ಪ್ರತ್ಯೇಕ ಸ್ಥಳಗಳಲ್ಲಿ ಸಂಗ್ರಹಿಸಿದ ಮೀನಿನ ಮಾದರಿಗಳನ್ನು ಮೈಸೂರಿನ National Accreditation Board for Laboratories (NABL) ನಿಂದ ಅಂಗೀಕೃತವಾಗಿರುವ ಪ್ರಯೋಗಾಲಯಕ್ಕೆ ಫಾರ್ಮಾಲಿನ್ ಅಂಶ ಇರುವ ಬಗ್ಗೆ ಖಚಿತ ಪಡಿಸಿಕೊಳ್ಳಲು ಕಳುಹಿಸಲಾಗಿತ್ತು. ಆದರೆ, ಮೀನಿನ ಮಾದರಿಗಳಲ್ಲಿ ಫಾರ್ಮಾಲಿನ ಅಂಶ ಇರುವುದಿಲ್ಲವೆಂದು ಧೃಡಪಡಿಸಿರುತ್ತಾರೆ.<br><br>ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆಯ ಅಧಿಕಾರಿಗಳೊಂದಿಗೆ ಮೀನುಗಾರಿಕೆ ಇಲಾಖೆಯ ಅಧಿಕಾರಿಗಳನ್ನು ಒಳಗೊಂಡಂತೆ ಫಾರ್ಮಾಲಿನ ಕ್ಷಿಪ್ರ ಪತ್ತೆ ಕಿಟ್‌ಗಳನ್ನು ಬಳಸಿ ಮೀನಿನ ಮಾದರಿಗಳ ಪರೀಕ್ಷೆ ಮುಂದುವರೆಸಲು ಸೂಚಿಸಲಾಗಿದೆ. |

| | | |
|---|---|---|
| ಈ) | ರಾಜ್ಯದಲ್ಲಿ ಇತರ ರಾಜ್ಯಗಳಿಂದ ಮೀನು ಮಾರಾಟಕ್ಕೆ ಮೀನುಗಳನ್ನು ತರಲಾಗುತ್ತಿರುವ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು; ಯಾವ ಯಾವ ರಾಷ್ಟ್ರಗಳಿಂದ ಮೀನುಗಳು ಮಾರಾಟಕ್ಕೆ ಬರುತ್ತವೆ; (ವಿವರ ನೀಡುವುದು) | ಮಹಾರಾಷ್ಟ್ರ, ಗೋವಾ, ಕೇರಳ ಮತ್ತು ತಮಿಳುನಾಡುಗಳಿಂದ ರಾಜ್ಯಕ್ಕೆ ಮೀನುಗಳನ್ನು ಮಾರಾಟಕ್ಕೆ ತರಲಾಗುತ್ತಿದೆ.<br><br>ಹೊರರಾಜ್ಯಗಳಿಂದ ಕರ್ನಾಟಕ ರಾಜ್ಯದೊಳಗೆ ಪ್ರವೇಶಿಸುವ ಮೀನು ಸಾಗಾಟ ವಾಹನಗಳು, ಆಹಾರ ಸುರಕ್ಷಾ ಮತ್ತು ಮಾನದಂಡಗಳ ಕಾಯ್ದೆ (2006)ರನ್ವಯ ಪರವಾನಗಿಗಳನ್ನು ಹೊಂದಿರುವುದರ ಬಗ್ಗೆ ರಾಜ್ಯದ ಗಡಿ ಪ್ರದೇಶದಲ್ಲಿ ಆಹಾರ ಸುರಕ್ಷತಾ ಅಧಿಕಾರಿಗಳು ತಪಾಸಣೆ ಮಾಡುವುದರ ಜೊತೆಗೆ ಮೀನು / ಮೀನಿನ ಆಹಾರ ಮಾದರಿಗಳನ್ನು ಸಂಗ್ರಹಿಸಿ ಪರೀಕ್ಷೆಗೆ ಒಳಪಡಿಸಲು ಸರ್ಕಾರವು ನಿಯಮ ರೂಪಿಸಿದೆ.<br><br>ಮುಂದುವರೆದು, ಬೇರೆ ರಾಜ್ಯಗಳಿಂದ ಸಂಸ್ಕರಣಾ ಕೇಂದ್ರಗಳಿಗೆ ಬರುವ ಮೀನುಗಳ ಗುಣಮಟ್ಟವನ್ನು ಸಂಸ್ಕರಣೆಗೆ ಒಳಪಡಿಸುವ ಮುನ್ನ ಸಂಬಂಧಿಸಿದ ಸಂಸ್ಕರಣಾ ಘಟಕಗಳ ಗುಣಮಟ್ಟ ನಿಯಂತ್ರಣಾ ವಿಭಾಗಗಳು ಪರಿಶೀಲಿಸುತ್ತವೆ. |
| ಉ) | ಮೀನು ಮಾರಾಟಕ್ಕೆ ಸಾರ್ವಜನಿಕ ಮಾರುಕಟ್ಟೆಗಳಲ್ಲಿ ದರ ನಿಗದಿಪಡಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಇದ್ದಲ್ಲಿ, ವಿವರ ನೀಡುವುದು? | — ದರ ನಿಗದಿಪಡಿಸುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ. |

ಸಂಖ್ಯೆ: ಪಸಂಮೀ 137 ಮೀಇಇ 2018

(ವೆಂಕಟರಾವ್ ನಾಡಗೌಡ)
ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು